# ✻ ತುಲಸೀದಾಸರ ಶ್ರೀರಾಮಚರಿತಮಾನಸ ✻

**ಸ್ವಾಮಿ ಮುಕ್ತಿಪದಾನಂದ**

ಶ್ರೀರಾಮಚರಿತಮಾನಸದಲ್ಲಿ ಗೋಸ್ವಾಮಿ ತುಲಸಿದಾಸರು ಶ್ರೀರಾಮಚಂದ್ರನ ಅನುಪಮ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಗೋಸ್ವಾಮಿಜೀ ಶ್ರೀರಾಮನನ್ನು ಕಂಡ ಬಗೆಯನ್ನು ಪೂಜ್ಯ ಸ್ವಾಮಿ ಆತ್ಮಾನಂದಜೀ ಹಾಗೂ ಪಂಡಿತ್ ರಾಮಕಿಂಕರ ಉಪಾಧ್ಯಾಯ ತಮ್ಮ ಪ್ರವಚನಗಳಲ್ಲಿ ತಿಳಿಸಿದ್ದಾರೆ. ಹಿಂದಿ ಭಾಷೆಯಲ್ಲಿರುವ ಗ್ರಂಥಮಾಲಿಕೆಗಳನ್ನು ಆಧರಿಸಿದ ಪ್ರಸ್ತುತ ಲೇಖನವನ್ನು ನೀಡಿರುವ ಸ್ವಾಮಿ ಮುಕ್ತಿಪದಾನಂದಜಿಯವರು ಮಂಗಳೂರಿನ ರಾಮಕೃಷ್ಣ ಮಿಷನ್ನಿನಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ರಾಮಚರಿತ ಮಾನಸದ ರಚನೆ ಮತ್ತು ಕರ್ತೃ

ಸುಮಾರು ನಾನ್ನೂರೈವತ್ತು ವರ್ಷಗಳ ಹಿಂದೆ ಜೀವಿಸಿದ್ದ ಗೋಸ್ವಾಮಿಜಿಯವರು, ಶ್ರೀರಾಮಚರಿತ ಮಾನಸವು ಪರಂಪರಾನುಗತವಾಗಿ ಬಂದದ್ದು, ಅದರ ರಚನೆಯನ್ನು ತಾವು ಮಾಡಿಲ್ಲವೆನ್ನುತ್ತಾರೆ. ಅದಾಗಲೇ ಪ್ರಸಿದ್ಧವಾಗಿದ್ದ ಸಂಸ್ಕೃತದ ಕಾವ್ಯಗಳಿಂದ ಆಯ್ದ ವಿಷಯಗಳನ್ನು ಆಗಿನ ಜನರ ಆಡುಭಾಷೆಯಾದ ಅವಧಿ ಭಾಷೆಯಲ್ಲಿ ತಾವು ಪ್ರಸ್ತುತ ಪಡಿಸುತ್ತಿರುವುದಾಗಿ ಪ್ರಾರಂಭದಲ್ಲಿಯೇ ತಿಳಿಸಿದ್ದಾರೆ:

ನಾನಾ ಪುರಾಣ ನಿಗಮಾಗಮ ಸಮ್ಮತಂ ಯದ್
ರಾಮಾಯಣೇ ನಿಗದಿತಂ ಕ್ವಚಿದನ್ಯತೋऽಪಿ ।
ಸ್ವಾಂತಃಸುಖಾಯ ತುಲಸೀ ರಘುನಾಥಗಾಥಾ-
ಭಾಷಾ ನಿಬಂಧಮತಿ ಮಂಜುಳಮಾತನೋತಿ ॥

'ನಾನಾ ವಿಧವಾದ ಪುರಾಣ, ವೇದ ಹಾಗೂ ಆಗಮಗಳಿಗೆ ಸಮನಾದ ಆದಿಕಾವ್ಯ ವಾಲ್ಮೀಕಿ–ರಾಮಾಯಣ ಅಧ್ಯಾತ್ಮ–ರಾಮಾಯಣ ಹಾಗೂ ಬೇರೆ ಕಡೆಗಳಿಂದಲೂ ದೊರೆತ ಶ್ರೀರಘುನಾಥನ ಮಂಗಳ ಕಥೆಯನ್ನು ತುಲಸಿಯು ತನ್ನ ಅಂತಃಕರಣ ಸುಖಕ್ಕಾಗಿ ಅತ್ಯಂತ ಮನೋಹರವಾದ ಜನಭಾಷೆಯಲ್ಲಿ ವಿಸ್ತಾರವಾಗಿ ಬಿತ್ತರಿಸುತ್ತಾನೆ.' **ರಚಿ ಮಹೇಸ ನಿಜ ಮಾನಸ ರಾಖಾ । ಪಾಇ ಸುಸಮಉ ಸಿವಾಸನ ಭಾಷಾ॥** 'ಭಗವಾನ್ ಶಂಕರನು ಈ ರಾಮಚರಿತ ಮಾನಸವನ್ನು ರಚಿಸಿ ಅದನ್ನು ತನ್ನ ಹೃದಯದೊಳಗೆ ಇಟ್ಟುಕೊಂಡನು. ಸರಿಯಾದ ಸಮಯ ತಿಳಿದು ಅವನು ಈ ಕಥೆಯನ್ನು ಪಾರ್ವತಿಗೆ ಹೇಳಿದನು.' ಈ ಕಾವ್ಯದ ಕರ್ತೃ ಭಗವಾನ್ ಶಂಕರನೆಂದು ತಿಳಿಸುತ್ತಾ ಗೋಸ್ವಾಮಿಜಿಯವರು ಹೀಗೆ ಹೇಳುತ್ತಾರೆ: "ಭಗವಾನ್ ಶಂಕರನಿಂದ ಈ ಕಥೆಯು ಪಾರ್ವತಿ ಮತ್ತು ಕಾಕಭುಶುಂಡಿಗೆ ಪ್ರಾಪ್ತವಾಯಿತು. ಕಾಕಭುಶುಂಡಿಯಿಂದ ಯಾಜ್ಞವಲ್ಕ್ಯರಿಗೆ ಪ್ರಾಪ್ತವಾಯಿತು ಮತ್ತು ನನ್ನ ಗುರುಗಳಿಂದ ನನಗೆ ದೊರಕಿತು." ಅದನ್ನು ಅವರು ೧೬೩೧ರಲ್ಲಿ ಅವಧಿ ಭಾಷೆಯಲ್ಲಿ ಬರೆದು ಪ್ರಕಟಗೊಳಿಸಿದರು. ಈ ಅಪರೂಪವಾದ ಗ್ರಂಥದಲ್ಲಿ ಮುಖ್ಯವಾಗಿ ನಮ್ಮನ್ನು



"ಅವಧ ತಹಾ ಜಹಾ ರಾಮ ನಿವಾಸು"

ಭಕ್ತನು ತನ್ನ ಹೃದಯವನ್ನು ಅಯೋಧ್ಯೆಯನ್ನಾಗಿ ಮಾಡಿದರೆ ಅದೇ ಕ್ಷಣದಲ್ಲಿ ಅಲ್ಲಿ ಶ್ರೀರಾಮನು ಪ್ರಕಟನಾಗುತ್ತಾನೆ

ಸೆಳೆಯುವ ಅಂಶವೆಂದರೆ ಶ್ರೀರಾಮನ ವ್ಯಕ್ತಿತ್ವದ ಪರಿಚಯ ಮತ್ತು ಜೀವನದ ಘಟನೆಗಳನ್ನು ಹೃದಯಂಗಮವಾಗಿ ತತ್ತ್ವಕ್ಕೆ ಚ್ಯುತಿಬಾರದಂತೆ ವಿವರಿಸುವ ಕುಶಲತೆ.

## ಶ್ರೀರಾಮಚರಿತಮಾನಸದ ಮೂಲ ಧ್ವನಿ ಏನು?

ಶ್ರೀರಾಮಚರಿತಮಾನಸದಲ್ಲಿ ಮಾನವ ಜೀವನದ ಎಲ್ಲ ಪ್ರಕಾರಗಳನ್ನೂ, ಅದರ ಎಲ್ಲ ಆದರ್ಶಗಳನ್ನೂ ಪಾತ್ರಗಳ ಮಾಧ್ಯಮದಿಂದ ವ್ಯಕ್ತಗೊಳಿಸಲಾಗಿದೆ. ಮಾನಸದ ಮೂಲ ಧ್ವನಿಯೇ ಶ್ರೀರಾಮನು ಈಶ್ವರನ ಅವತಾರ ಮತ್ತು ಆತನನ್ನು ಭಕ್ತಿ, ಜ್ಞಾನಗಳ ಮೂಲಕ ಪಡೆಯುವುದೇ ಜೀವನದ ಲಕ್ಷ್ಯವೆಂಬುದು. ಆದರೆ ಆತನಲ್ಲಿ ಪ್ರೀತಿ ಇಲ್ಲದೆ ಇದು ಸಂಭವಿಸುವುದಿಲ್ಲ. **ಮಿಲಹಿ ನ ರಘುಪತಿ ಬಿನು ಅನುರಾಗ**— 'ಅನುರಾಗ ಪ್ರೇಮವಿಲ್ಲದೆ ರಘುಪತಿ ದೊರಕಲಾರನು.' ಮಾನಸದ ಎಳೆ ಎಳೆಗಳು ಯಾವ ರೀತಿಯಲ್ಲಿ ನೇಯಲ್ಪಟ್ಟಿವೆ

**ಎಂದರೆ ಶ್ರೀರಾಮನ ಲೀಲೆಗಳಲ್ಲಿ ಓದುಗ ಹಾಗೂ ಕೇಳುವವರು ಪರವಶಗೊಂಡು ಅದರ ಫಲಸ್ವರೂಪವಾಗಿ ಅವರಲ್ಲಿ ಪ್ರೇಮವು ಜಾಗೃತವಾಗುತ್ತದೆ.**

**ಐತಿಹಾಸಿಕ ದೃಷ್ಟಿ ಮತ್ತು ಭಾವ ದೃಷ್ಟಿಯಲ್ಲಿ ಶ್ರೀರಾಮ**

ತುಲಸೀದಾಸರ ಶ್ರೀರಾಮನು ಕೇವಲ ಐತಿಹಾಸಿಕ ಪುರುಷನಾಗಿರಲಿಲ್ಲ. ಅವನು ಭಾವಪುರುಷನೂ ಆಗಿರುವನು. ತುಲಸೀದಾಸರು ಕೇವಲ ಭಾವನೇತ್ರಗಳಿಂದಲೇ ತನ್ನ ರಾಮನನ್ನು ನೋಡಲು ಇಚ್ಛಿಸುತ್ತಾರೆ. ಭಾವದೃಷ್ಟಿಯ ಒಂದು ವೈಶಿಷ್ಟ್ಯವೆಂದರೆ ಅದು ಇತಿಹಾಸದ ಬಿಗಿಹಿಡಿತವನ್ನು ಸಡಿಲಗೊಳಿಸಿ ಅಂತರಂಗದೊಳಗೆ ಸುಗಮವಾಗಿ ಪ್ರವೇಶಿಸುವುದು.

ಒಂದು ವೇಳೆ ಶ್ರೀರಾಮನು ಕೇವಲ ಐತಿಹಾಸಿಕ ಪುರುಷ ಮಾತ್ರ ಆಗಿದ್ದಲ್ಲಿ, ಕೆಲವು ಸಹಸ್ರ ವರ್ಷಗಳ ಮೊದಲು ಅಯೋಧ್ಯಾ ಎಂಬ ಸ್ಥಾನದಲ್ಲಿ ಅವನು ದಶರಥ ಕೌಸಲ್ಯೆಯರ ಪುತ್ರನಾಗಿ ಜನಿಸಿ, ಕೆಲವು ವರ್ಷಗಳ ನಂತರ ಅವನ ಅವಸಾನವೂ ಆಯಿತು ಎಂಬ ಅಂಶವನ್ನು ನಾವು ಅನಿವಾರ್ಯವಾಗಿ ಒಪ್ಪಬೇಕಾಗುತ್ತದೆ. ಅಂದರೆ ಶ್ರೀರಾಮನು ದೇಶಕಾಲಗಳ ಚೌಕಟ್ಟಿನ ಹಿಡಿತದಲ್ಲಿರುವ ಮಾನವ, ಮುಕ್ತ ಪುರುಷನಲ್ಲ ಎಂಬ ಅಭಿಪ್ರಾಯ ಇದರಿಂದ ಮೂಡುತ್ತದೆ. ಆದರೆ ಭಾವದೃಷ್ಟಿಯ ವೈಶಿಷ್ಟ್ಯವೆಂದರೆ ಅದು ಶ್ರೀರಾಮನನ್ನು ದೇಶ ಮತ್ತು ಕಾಲದ ಎಲ್ಲಾ ಮೇರೆಗಳಿಂದ ಪಾರುಗೊಳಿಸುತ್ತದೆ. ತುಲಸೀದಾಸರ ಭಾವನಾತ್ಮಕ ದೃಷ್ಟಿಕೋನವು ಶ್ರೀರಾಮನನ್ನು ಸಾರ್ವಕಾಲಿಕ, ಸಾರ್ವಭೌಮಿಕ ಮತ್ತು ಸಾರ್ವಜನಿಕ ರಾಮನನ್ನಾಗಿ ಮಾಡಿರುವುದು. ತುಲಸೀದಾಸರ ಈ ಶ್ರೀರಾಮನು ಯಾವುದೇ ಸ್ಥಳದಲ್ಲಿಯಾಗಲಿ, ಯಾವ ಕ್ಷಣದಲ್ಲಿಯಾಗಲಿ ಅವತರಿಸಲು ಶಕ್ತನಾಗಿದ್ದಾನೆ. **ಅವಧ ತಹಾ ಜಹಾ ರಾಮ ನಿವಾಸು** 'ಭಕ್ತನು ತನ್ನ ಹೃದಯವನ್ನು ಅಯೋಧ್ಯೆಯನ್ನಾಗಿ ಮಾಡಿದರೆ ಅದೇ ಕ್ಷಣದಲ್ಲಿ ಅಲ್ಲಿ ಶ್ರೀರಾಮನು ಪ್ರಕಟನಾಗುತ್ತಾನೆ.' ಇದು ಭಾವದೃಷ್ಟಿಯ ವಿಶೇಷತೆಯಾಗಿದೆ. ಇದರಿಂದಲೇ ತುಲಸೀದಾಸರ ಶ್ರೀರಾಮನು ಜನಿಸುವುದೂ ಇಲ್ಲ, ಮರಣ ಹೊಂದುವುದೂ ಇಲ್ಲ. ಅವನು ಸುಮ್ಮನೆ ಪ್ರಕಟಗೊಳ್ಳುತ್ತಾನೆ. ತುಲಸೀದಾಸರೇ ಸ್ವತಃ ಹೇಳುವಂತೆ– **ಜಗನಿವಾಸ ಪ್ರಭು ಪ್ರಗಟೆ ಅಖಿಲ ಲೋಕ ವಿಶ್ರಾಮ । ಭಯೆ ಪ್ರಗಟ ಕೃಪಾಲಾ ದೀನದಯಾಲಾ ॥**

**ಇತಿಹಾಸ ಮತ್ತು ಭಾವ ದೃಷ್ಟಿಯಲ್ಲಿನ ಇನ್ನೂ ಕೆಲವು ವ್ಯತ್ಯಾಸಗಳು**

ಇತಿಹಾಸ ದೃಷ್ಟಿಯು ವ್ಯಕ್ತಿಯ ಜ್ಞಾನದ ವೃದ್ಧಿಯನ್ನು ಮಾಡುತ್ತದೆ, ಆದರೆ ವ್ಯಕ್ತಿಯ ಅಂತಃಕರಣವನ್ನು ಸಂತುಷ್ಟಗೊಳಿಸಲು ಸಮರ್ಥವಾಗಿರುವುದಿಲ್ಲ. ಭಾವದೃಷ್ಟಿಯು ಅಂತಃಕರಣವನ್ನು ಶಾಂತ ಹಾಗೂ ಸಂತುಷ್ಟವನ್ನಾಗಿ ಮಾಡುತ್ತದೆ. ಇತಿಹಾಸವೆಂದರೆ ಶವಪರೀಕ್ಷೆಯಂತೆ. ಇದೊಂದು ಆವಶ್ಯಕ ವಿದ್ಯೆಯಾಗಿದ್ದರೂ ಇದು ಸುಖದಾಯಕವಾದ ಕಾರ್ಯವಲ್ಲ. ಕಾರಣ, ಯಾವ ವೈದ್ಯರು ಅದನ್ನು ನಡೆಸುತ್ತಾರೋ ಅವರಿಗೂ ಅದು ಆನಂದದಾಯಕವಾದ ಕೆಲಸವೇನಲ್ಲ. ಆದರೆ ಅವರಿಗೆ ಅದರಿಂದ ಜ್ಞಾನಧನಗಳ ವೃದ್ಧಿಯಾಗುತ್ತದೆ. ಮತ್ತೆ ಅದನ್ನು ಮಾಡಲೇಬೇಕಾದುದರಿಂದ ಅದನ್ನು ಮುಚ್ಚಿದ ಕೋಣೆಯಲ್ಲಿ ಮಾಡಲಾಗುತ್ತದೆ.

ತುಲಸೀದಾಸರ ಭಾವದೃಷ್ಟಿಯನ್ನು ಒಂದು ಪ್ರಸಂಗದ ಮೂಲಕ ಸರಿಯಾಗಿ ತಿಳಿಯಬಹುದು. ಆದಿಕವಿ ವಾಲ್ಮೀಕಿಯನ್ನು ದೇವರ್ಷಿ ನಾರದರು ಕಾಣಲು ಬಂದಾಗ, ವಾಲ್ಮೀಕಿಗಳು ಅವರನ್ನು ಕೇಳುತ್ತಾರೆ—**ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್?**—ದೇವರ್ಷಿಗಳೇ, ಈ ಜಗತ್ತಿನಲ್ಲಿ ಎಲ್ಲರಿಗಿಂತ ಮಿಗಿಲಾದ ಗುಣವಂತ, ವೀರ್ಯವಂತ ಮನುಷ್ಯ ಯಾರೆಂದು ದಯಮಾಡಿ ತಿಳಿಸುವಿರಾ? ಈ ಪ್ರಶ್ನೆಗೆ ನಾರದರು ಉತ್ತರರೂಪದಲ್ಲಿ ಭಗವಾನ್ ಶ್ರೀರಾಮನ ಚರಿತ್ರೆಯನ್ನು ಸೂತ್ರರೂಪದಲ್ಲಿ ತಿಳಿಸಿ ವಾಲ್ಮೀಕಿಗೆ, "ಮಹರ್ಷಿಗಳೇ, ಈಗ ಈ ಚರಿತ್ರೆಯನ್ನು ವಿಸ್ತರಿಸಿ ಬರೆಯಿರಿ" ಎಂದು ಸೂಚಿಸುತ್ತಾರೆ. ವಾಲ್ಮೀಕಿಗಳು ಶ್ರೀರಾಮನ ಸಮಕಾಲೀನರೆಂಬುದು ಪೌರಾಣಿಕವಾಗಿ ಪ್ರಸಿದ್ಧವಾಗಿದೆ. ಆದರೆ ಸಮಕಾಲೀನರಾಗಿದ್ದೂ ಕೂಡ ಶ್ರೀರಾಮನ ಪರಿಚಯವನ್ನು ದೇವರ್ಷಿ ನಾರದರಿಂದ ಪಡೆದರು!

ಇಲ್ಲಿ ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ತುಲಸೀದಾಸರ ಜನ್ಮ ಆದದ್ದು ಶ್ರೀರಾಮನಿಗಿಂತ ಸಾವಿರಾರು ವರ್ಷಗಳ ಅನಂತರವೇ. ಶ್ರೀರಾಮನ ಜನ್ಮ ತ್ರೇತಾಯುಗದಲ್ಲಾಗಿದ್ದರೆ ತುಲಸೀದಾಸರದಾದರೋ ಇಂದಿಗೆ ೪೫೦ ವರ್ಷಗಳ ಹಿಂದೆಯಷ್ಟೇ ಆಗಿದೆ. ಆದರೆ ತುಲಸೀದಾಸರು ಶ್ರೀರಾಮನನ್ನು ವರ್ಣಿಸುವಾಗಲೆಲ್ಲ ಮೂರನೇ ವ್ಯಕ್ತಿಯಿಂದ ಅವನ ಪರಿಚಯ ಮಾಡಿಸಿಕೊಳ್ಳುವುದಿಲ್ಲ. ಇಲ್ಲಿ ವಿಚಿತ್ರವೇನೆಂದರೆ ಯಾರು ಸಮಕಾಲೀನರೊ ಅವರು ರಾಮನಿಂದ ದೂರವಿದ್ದರು ಮತ್ತು ಯಾರು ಕಾಲದ ದೃಷ್ಟಿಯಿಂದ ದೂರವಿದ್ದರೋ ಅವರು ಭಾವಪ್ರಪಂಚದಲ್ಲಿ ಶ್ರೀರಾಮನ ಸಮಕಾಲೀನರಾಗಿರುವುದು. ಇಲ್ಲಿ ನಾವು ತುಳಸೀದಾಸರ ಭಾವದ ಆಳವನ್ನು ತಿಳಿಯಬೇಕಾಗಿದೆ. ವಾಲ್ಮೀಕಿಗಳು ದೇವರ್ಷಿ ನಾರದರಿಂದ ಶ್ರೀರಾಮನ ಪರಿಚಯ ಮಾಡಿಸಿಕೊಂಡರೆ, ತುಲಸೀದಾಸರು ನೇರವಾಗಿ ಶ್ರೀರಾಮನ ಪರಿಚಯ ಮಾಡಿಕೊಳ್ಳುತ್ತಾರೆ; ಅವರು ಭಗವಾನ್ ಶ್ರೀರಾಮನ ಪ್ರತಿಯೊಂದು ಲೀಲೆಯಲ್ಲೂ ಪಾಲ್ಗೊಂಡು, ಅನುಭವಿಸಿ, ನಿರೂಪಿಸುತ್ತಾರೆ. ಜನ್ಮಪ್ರಸಂಗವೇ ಇರಲಿ ಅಥವ ವಿವಾಹಪ್ರಸಂಗವೇ ಇರಲಿ, ಅದನ್ನು

ತುಲಸೀದಾಸರು ಹೇಗೆ ಅನುಭವಿಸಿದ್ದಾರೆಂದರೆ ಯಾವಾಗ ಶ್ರೀರಾಮನ ಅವತಾರವಾಯಿತೊ ಆಗ ಅವರೇ ಅಲ್ಲಿದ್ದಂತೆ ಮತ್ತು ಯಾವಾಗ ತುಳಸೀದಾಸರ ಜನ್ಮವಾಯಿತೊ ಆಗ ಅಲ್ಲಿ ಶ್ರೀರಾಮನೇ ಇದ್ದಂತೆ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಭಕ್ತ ಮತ್ತು ಭಗವಾನ್ ಬೇರೆ ಬೇರೆಯಲ್ಲ. ಕಾಲ ಅಥವಾ ದೇಶಗಳು ಅವರನ್ನು ದೂರಮಾಡಲಾರವು. ರಾಮನು ಜನ್ಮತಾಳಿದಾಗ ತುಳಸೀದಾಸರು ಸ್ವಾಗತ ಗೀತೆಯನ್ನು ಹಾಡುವುದನ್ನು ಕಾಣುತ್ತೇವೆ. ಶ್ರೀರಾಮನು ಯಾವಾಗ ಹೋಳಿಯನ್ನು ಆಡುವನೊ ಆಗ ತುಳಸೀದಾಸರೂ ಅಲ್ಲಿ ಆಡುತ್ತಿರುವರು. ಅವರು ಬರೆಯುತ್ತಾರೆ—'ಭಗವಾನ್ ಶ್ರೀರಾಮನು ತನ್ನ ಮಿತ್ರರೊಂದಿಗೆ ಹೋಳಿ ಆಟವನ್ನು ಆಡಿದನು ಮತ್ತು ಇದಾದ ಮೇಲೆ ದಾನವನ್ನು ನೀಡಿದನು. ಬಹಳಷ್ಟು ಜನರು ದಾನವನ್ನು ಪಡೆದರು.' **ತುಲಸೀದಾಸ ತಹಂ ಭಗತಿ ದಾನ ಭರ ಮಾಂಗಿ** – ತುಳಸೀದಾಸನು ಆಗ ಭಗವಾನ್ ಶ್ರೀರಾಮನಿಂದ ಭಕ್ತಿಯನ್ನೇ ವರವಾಗಿ ಬೇಡಿದನು. ಶ್ರೀರಾಮನು ರಂಗಿನ ಪಿಚಕಾರಿಯನ್ನು ಬೇರೆಯವರ ಮೇಲೆ ಹಾರಿಸಿರಲಿ, ಹಾಗೆ ಹಾರಿಸಿದ ಬಣ್ಣ ತಮ್ಮ ಮೇಲೆಯೇ ಬಿದ್ದು ತಾವೂ ಬಣ್ಣಗೊಂಡವರಂತೆ ವರ್ಣಿಸುವುದರಲ್ಲಿ ತುಳಸೀದಾಸರ ಅನುಭವದ ನೈಜತೆಯನ್ನು ನಾವು ಕಾಣಬಹುದು. ಶ್ರೀರಾಮನ ಪ್ರತಿಯೊಂದು ಲೀಲೆಯಲ್ಲೂ ತಾವೇ ಭಾಗಿಗಳಾಗಿದ್ದು ಪ್ರತ್ಯಕ್ಷವಾಗಿ ನೋಡಿದಂತೆ ಅದನ್ನು ವರ್ಣಿಸುತ್ತಾರೆ.

### ಆಧ್ಯಾತ್ಮಿಕ ಬಲ ಮತ್ತು ಶಾರೀರಿಕ ಬಲಗಳ ಸಮನ್ವಯದ ಆದರ್ಶ ಶ್ರೀರಾಮ

ತುಲಸೀದಾಸರು ಆಯ್ಕೆ ಮಾಡಿಕೊಂಡಿರುವ ಕಥಾನಾಯಕ ಶ್ರೀರಾಮನು ಆದರ್ಶ ಪುರುಷ. ಶಾರೀರಿಕ ಬಲದೊಡನೆ ಆಧ್ಯಾತ್ಮಿಕ ಔನ್ನತ್ಯವನ್ನೂ ಏರಿದವನು. ಕೇವಲ ಶಾರೀರಿಕ ಬಲದ ಪರಾಕಾಷ್ಠತೆಯಿಂದ ಅವನ ಮಹಿಮೆ ಪ್ರಾಪ್ತವಾದುದಲ್ಲ; ಅಥವಾ ಮಾನಸಿಕ ಆಧ್ಯಾತ್ಮಿಕ ಬಲಗಳನ್ನು ಮಾತ್ರ ಪಡೆದಿದ್ದು ಶಾರೀರಿಕವಾಗಿ ದುರ್ಬಲವಾಗಿರುವುದರಿಂದಲೂ ಈ ಹಿರಿಮೆಯು ಸಿದ್ಧಿಸುವಂಥದಲ್ಲ. ಹಾಗಿದ್ದಿದ್ದರೆ, ರಾವಣನನ್ನು ಸೋಲಿಸಿದ ಶಕ್ತಿಶಾಲಿಗಳಾದ ವಾಲಿ ಮತ್ತು ಸಹಸ್ರಬಾಹು ಇವರ ಆದರ್ಶವಾಗಿರುತ್ತಿದ್ದರು ಅಥವಾ ಜ್ಞಾನಿಗಳಾದ ವಸಿಷ್ಠರನ್ನು ತಮ್ಮ ಮಹಾಕಾವ್ಯದ ನಾಯಕರ ರೂಪದಲ್ಲಿ ಸ್ವೀಕರಿಸುತ್ತಿದ್ದರು. ಅವರ ಆದರ್ಶಪುರುಷ ಶ್ರೀರಾಮನು ಬಾಹ್ಯದಲ್ಲಿ ಕಾಣುವ ಶಕ್ತಿಶಾಲಿ ರಾವಣನನ್ನು ಸಂಹರಿಸುತ್ತಾನೆ ಮಾತ್ರವಲ್ಲದೆ ಅಂತಃಕರಣದ ಒಳಗೆ ಇರುವ ಗೆಲ್ಲಲು ಕಠಿಣವಾದ ಅಹಂಕಾರರೂಪೀ ರಾವಣನನ್ನೂ ನಾಶಗೊಳಿಸುತ್ತಾನೆ. ಶಾರೀರಿಕ ಬಲದಿಂದ ಹೊರಗಿನ ಶತ್ರುಗಳ ಮೇಲೆ ಜಯ ಸಾಧಿಸಿ, ಆಧ್ಯಾತ್ಮಿಕ ಬಲದಿಂದ ಆಂತರಿಕ ಶತ್ರುಗಳ ಮೇಲೆ ನಿಯಂತ್ರಣ ಸಾಧಿಸುವ—ಈ ಎರಡರ ಸಮನ್ವಯ ಸಾಧಿಸಿರುವವನೇ ಗೋಸ್ವಾಮಿ ತುಲಸೀದಾಸರ ಆದರ್ಶ ಪುರುಷನಾದ ಶ್ರೀರಾಮನಾಗಿರುವನು.

### ಇತಿಹಾಸ, ಚರಿತ್ರೆ ಮತ್ತು ಲೀಲೆ

ಭಗವಾನ್ ಶ್ರೀರಾಮನ ಚರಿತ್ರೆಯಲ್ಲಿ ಬರುವ ಘಟನೆಗಳನ್ನು ನಾವು ಇತಿಹಾಸವೆಂದು ಪರಿಗಣಿಸಬೇಕೊ ಅಥವಾ ಲೀಲೆ ಎಂದೋ ಎಂಬುದು ಪ್ರಶ್ನೆ. ರಾಮಾಯಣದಲ್ಲಿ ಮೂರು ಶಬ್ದಗಳು ಬರುತ್ತವೆ: ಚರಿತ್ರೆ, ಕಥೆ ಮತ್ತು ಲೀಲೆ. ವ್ಯಕ್ತಿಯ ಜೀವನದ ವಿಶಿಷ್ಟ ಮೂಲ ಗುಣವನ್ನು ಚರಿತ್ರೆಯ ರೂಪದಲ್ಲಿ ಹೇಳುವೆವು. ಲೀಲೆಯ ತಾತ್ಪರ್ಯ ಅಭಿನಯ. ಅಂದರೆ ಯಾವುದು ಅದ್ಭುತ, ಅಸಾಮಾನ್ಯವೋ, ನಾಟಕ ಸದೃಶವೋ ಅಂತಹ ಅಂಶಗಳು. ಚರಿತ್ರೆ ಮತ್ತು ಲೀಲೆ ಇವುಗಳು ಪರಸ್ಪರ ಒಂದಕ್ಕಿಂತ ಒಂದು ಭಿನ್ನ ಎಂದು ತಿಳಿಸುವುದು ಆವಶ್ಯಕ. ಉದಾ: ನಿಮ್ಮ ಮಿತ್ರನೊಬ್ಬ ದೊಡ್ಡ ಸತ್ಯವಾದಿ ಆಗಿರಬಹುದು. ಆದರೆ ನಾಟಕದಲ್ಲಿ ಅವನಿಗೆ ಸುಳ್ಳು ಹೇಳುವ ಪಾತ್ರವನ್ನು ಕೊಟ್ಟಿದ್ದೇ ಆದರೆ ಅವನು ಅದರಲ್ಲಿ ಸುಳ್ಳುಹೇಳುವ ಪಾತ್ರವನ್ನು ಮಾಡುವನು. ಇದಕ್ಕೆ ವಿಪರೀತವಾಗಿ ಸ್ವಭಾವತಃ ಸುಳ್ಳೇ ಹೇಳುವವನಿಗೆ ನಾಟಕದಲ್ಲಿ ಹರಿಶ್ಚಂದ್ರನ ಭೂಮಿಕೆಯನ್ನು ಕೊಟ್ಟಿದ್ದೇ ಆದರೆ ಅವನು ಸತ್ಯವಾದಿಯಾಗಿ ಮಾತನಾಡತೊಡಗುವನು. ಆದ್ದರಿಂದ ನಾಟಕದಲ್ಲಿನ ವ್ಯಕ್ತಿಯ ನಟನೆಯನ್ನು ನೋಡಿ ಅವನ ಚರಿತ್ರೆಯ ವಿಷಯದಲ್ಲಿ ನಿರ್ಣಯವನ್ನು ಮಾಡಿದರೆ ಅದು ತಪ್ಪಾಗುವುದು.

ಇತಿಹಾಸದ ಕ್ಷೇತ್ರದಲ್ಲಿ ಮೊದಲು ಘಟನೆಗಳು ಘಟಿಸುತ್ತವೆ ಅನಂತರ ಅವು ದಾಖಲಿಸಲ್ಪಡುವುವು. ಆದರೆ ನಾಟಕ ಮೊದಲು ಬರೆಯಲ್ಪಟ್ಟು ಅನಂತರ ಅಭಿನಯಕ್ಕೆ ಅನುಸಾರವಾಗಿ ಅದನ್ನು ಅಳವಡಿಸಿಕೊಳ್ಳಲಾಗುವುದು. ನಾಟಕದ ಕರ್ತೃ ಬರೆದದ್ದನ್ನು ಅನಂತರ ಪಾತ್ರಗಳು ಆಡಿ ತೋರಿಸುವರು.

ಭಗವಾನ್ ಶ್ರೀರಾಮನ ವಿಷಯದಲ್ಲಿ ಎಷ್ಟು ಗ್ರಂಥಗಳು ರಚಿತವಾಗಿವೆಯೋ ಅವುಗಳಲ್ಲಿ ಘಟನೆಗಳ ನಿರೂಪಣೆಯಲ್ಲಿ ಬಹಳ ವ್ಯತ್ಯಾಸಗಳು ಕಂಡುಬರುತ್ತವೆ. ವಾಲ್ಮೀಕಿ ರಾಮಾಯಣ, ಅಧ್ಯಾತ್ಮ ರಾಮಾಯಣ, ಲೋಮಶ ರಾಮಾಯಣ, ಭುಶುಂಡಿ ರಾಮಾಯಣ, ಅಗಸ್ತ್ಯ ರಾಮಾಯಣ ಮುಂತಾದುವುಗಳಲ್ಲಿ ಒಂದೇ ಘಟನೆಯು ಏಕರೀತಿಯಲ್ಲಿ ನಿರೂಪಿತವಾಗಿಲ್ಲದಿರುವುದು ಗಮನಿಸಬೇಕಾದ ಅಂಶ.

ರಾಮಚರಿತಮಾನಸದಲ್ಲಿ ಶ್ರೀರಾಮನು ಚಿತ್ರಕೂಟದತ್ತ ಹೊರಡುವಾಗ ಗಂಗಾತೀರದಲ್ಲಿ ಅಂಬಿಗನು ಸಿಗುತ್ತಾನೆ. ಅವನು ಶ್ರೀರಾಮನ ಪಾದಗಳನ್ನು ತೊಳೆಯುತ್ತಾನೆ. ಅಧ್ಯಾತ್ಮ

ರಾಮಾಯಣದಲ್ಲಿ ಶ್ರೀರಾಮನು ಸೀತಾಸ್ವಯಂವರ ಪ್ರಸಂಗದಲ್ಲಿ ಜನಕಪುರಿಯತ್ತ ಹೊರಡುವಾಗ ಅಂಬಿಗನು ಶ್ರೀರಾಮನ ಕಾಲು ತೊಳೆಯುವ ಹಾಗೂ ನದಿ ದಾಟಿಸುವ ಸನ್ನಿವೇಶವಿದೆ. ಇಲ್ಲಿ ದೇಶ ಮತ್ತು ಕಾಲದ ದೃಷ್ಟಿಯಿಂದ ತೀರ ವ್ಯತ್ಯಾಸವಿದೆ. ವಿವಾಹದ ಸಮಯ ಮತ್ತು ವನಕ್ಕೆ ಹೋಗುವ ಸಮಯಕ್ಕೂ ಹನ್ನೆರಡು ವರ್ಷಗಳ ಅಂತರವಿದೆ. ಚಿತ್ರಕೂಟ ಮಾರ್ಗ, ಜನಕಪುರಿಯ ಮಾರ್ಗ ಭೌಗೋಳಿಕ ದೃಷ್ಟಿಯಿಂದ ತೀರ ಭಿನ್ನ ಮಾರ್ಗಗಳು. ಈಗ ಇಷ್ಟೆಲ್ಲಾ ರಾಮಾಯಣಗಳಲ್ಲಿ ಮೂಲ ರಾಮಾಯಣ ಯಾವುದು? ಕೆಲವರ ಅಭಿಪ್ರಾಯದಲ್ಲಿ ವಾಲ್ಮೀಕಿ ರಾಮಾಯಣವೇ ಮೂಲ ಮತ್ತು ಬೇರೆ ರಾಮಾಯಣಗಳು ನಂತರ ಬಂದ ಅದರ ರೂಪಾಂತರಗಳು.

ಗೋಸ್ವಾಮಿ ತುಲಸೀದಾಸರಿಗೂ ಇದೇ ಪ್ರಶ್ನೆ ಬೇರೊಂದು ರೂಪದಲ್ಲಿ ಕಾಡಿದಂತೆ ತೋರುತ್ತದೆ. ಕಾರಣ ಎಷ್ಟು ರಾಮಾಯಣಗಳಿವೆ ಎಂಬ ಪ್ರಶ್ನೆಗೆ ಅವರ ಉತ್ತರ **ರಾಮಾಯಣ ಸತಕೋಟಿ - ಅಪಾರಾ** "ನೂರು ಕೋಟಿ ರಾಮಾಯಣಗಳು". ಕೇಳುವವರಿಗೆ ಇದು ಅತಿಶಯೋಕ್ತಿ ಎಂದು ತೋರುವುದು. ಆದರೆ ತುಲಸೀದಾಸರು ಶತ ಕೋಟಿಯ ನಂತರ **ಅಪಾರಾ** ಎಂಬ ಪದವನ್ನು ಸೇರಿಸಿದ್ದಾರೆ. ರಾಮಾಯಣದಲ್ಲಿ ಒಂದು ಪ್ರಸಂಗ ಬರುತ್ತದೆ. ಭಗವಾನ್ ಶ್ರೀರಾಮನು ಲಂಕಾವಿಜಯದ ನಂತರ ಅಯೋಧ್ಯೆಗೆ ಹಿಂತಿರುಗಿದಾಗ ಅವನನ್ನು ಸ್ವಾಗತಿಸಲು ಇಡೀ ಅಯೋಧ್ಯೆಯು ತವಕಗೊಳ್ಳುತ್ತದೆ. ಪ್ರತಿಯೊಬ್ಬನೂ ತಾನು ಶ್ರೀರಾಮನ ಹತ್ತಿರ ತಲುಪಲು ಸಾಧ್ಯವಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು ಭಾವಿಸುತ್ತಾನೆ. ಶ್ರೀರಾಮನು ಒಬ್ಬನೇ ವ್ಯಕ್ತಿಯಾಗಿದ್ದರೆ ಕೆಲವೇ ವ್ಯಕ್ತಿಗಳು ಅವನ ಹತ್ತಿರವಿರಲು ಸಾಧ್ಯವಾಗುವುದು ಮತ್ತು ಇತರ ಲಕ್ಷಗಟ್ಟಲೆ ಜನರು ದೂರವೇ ಇರಬೇಕಾಗುವುದು. ಆಗ ತುಲಸೀದಾಸರು ಒಂದು ಹೊಸ ಮಾತನ್ನು ಹೇಳುತ್ತಾರೆ:

**ಪ್ರೇಮಾತುರ ಸಬ ಲೋಗ ನಿಹಾರಿ ಕೌತುಕ**
**ಕೀನ್ಹ ಕೃಪಾಲ ಖರಾರೀ ।**
**ಅಮಿತರೂಪ ಪ್ರಗಟೇ ತೇಹಿ ಕಾಲಾ ಜಥಾ ಜೋಗ**
**ಮಿಲೆ ಸಬಹಿ ಕೃಪಾಲ ॥**

"ಭಗವಾನ್ ಶ್ರೀರಾಮನು ಅಯೋಧ್ಯೆಯಲ್ಲಿ ಎಷ್ಟು ನಾಗರಿಕರಿದ್ದರೋ ಅಷ್ಟು ರೂಪಗಳನ್ನು ಪಡೆದನು ಮತ್ತು ಎಲ್ಲರೊಡನೆಯೂ ಬೆರೆತನು." ಆ ಸಂದರ್ಭವನ್ನು ಕಲ್ಪಿಸಿಕೊಂಡರೆ ಬಹುಶಃ ಹೀಗಿತ್ತೆಂದು ಎನಿಸುತ್ತದೆ. ಯಾರು ಹಿರಿಯರೋ ಭಗವಾನ್ ಶ್ರೀರಾಮನು ಅವರ ಚರಣಗಳಿಗೆ ಪ್ರಣಾಮ ಮಾಡುತ್ತಿರುತ್ತಾನೆ, ಯಾರು ಕಿರಿಯರೋ ಅವರ ಬಾಗಿದ ಶಿರಗಳಿಗೆ ಆಶೀರ್ವದಿಸುತ್ತಾನೆ. ಯಾರು ಸಮವಯಸ್ಕರೋ ಅವರನ್ನು ತಬ್ಬಿಕೊಳ್ಳುತ್ತಾನೆ. ಪ್ರತಿಯೊಬ್ಬರೂ ಶ್ರೀರಾಮನನ್ನು ಪಡೆದು ಪ್ರೀತಿ ಹಾಗೂ ಆನಂದವನ್ನು ಅನುಭವಿಸುತ್ತಿದ್ದರೆಂದೆನಿಸುತ್ತದೆ. ಈಗ ಒಂದು ವೇಳೆ ಅವರಲ್ಲಿ ಪ್ರತಿಯೊಬ್ಬರೂ ಒಂದೊಂದು ರಾಮಾಯಣವನ್ನು ಬರೆದಿದ್ದರೆ ಪ್ರತಿಯೊಬ್ಬರ ರಾಮಾಯಣವೂ ಬೇರೆ ಬೇರೆ ಆಗಿರುತ್ತಿತ್ತು. ತುಲಸೀದಾಸರು ಹೇಳುತ್ತಾರೆ, "ಜಗತ್ತಿನಲ್ಲಿ ಎಷ್ಟು ಜನ ಹುಟ್ಟಿದ್ದಾರೊ ಮತ್ತು ಮುಂದೆ ಎಷ್ಟು ಜನ ಹುಟ್ಟುವರೊ, ಆ ಎಲ್ಲರಿಗಾಗಿ ಎಲ್ಲಿಯ ತನಕ ಒಬ್ಬೊಬ್ಬ ಶ್ರೀರಾಮನು ಆಗುವುದಿಲ್ಲವೋ ಅಲ್ಲಿಯ ತನಕ ಮನುಷ್ಯನಿಗೆ ಸಂತೋಷ ಪ್ರಾಪ್ತವಾಗುವುದಿಲ್ಲ." ಅಂದರೆ ತುಲಸೀದಾಸರ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಶ್ರೀರಾಮನ ಅವತಾರದ ಆವಶ್ಯಕತೆ ಇದೆ ಮತ್ತು ಇದು ಸಂಭವಿಸಲು ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಯ ಭಾವನೆಗೆ ಶ್ರೀರಾಮನು ತೃಪ್ತಿಕೊಟ್ಟು ಪ್ರತಿಯೊಬ್ಬನೂ ಶ್ರೀರಾಮನನ್ನು ತನ್ನವನೆಂದು ಭಾವಿಸಲು ಮತ್ತು ಪ್ರತಿಯೊಬ್ಬನ ಜೀವನದಲ್ಲಿ ಶ್ರೀರಾಮನು ಪ್ರವೇಶವನ್ನು ಪಡೆಯಲು ಸಾಧ್ಯವಾಗಬೇಕಾದರೆ, ಆಯಾ ವ್ಯಕ್ತಿಯ ಆಧ್ಯಾತ್ಮಿಕ ವಿಕಾಸಕ್ಕೆ ಸರಿಯಾಗಿ ರಾಮನು ವ್ಯಕ್ತಗೊಳ್ಳಬೇಕಾಗುತ್ತದೆ. ಶ್ರೀರಾಮನ ಕಥೆಗಳಲ್ಲಿ ನಮಗೆ ಸಂಶಯ ಉಂಟಾಗದಿರಲಿ ಎಂಬ ದೃಷ್ಟಿಯಿಂದ ಗೋಸ್ವಾಮಿ ಹೇಳುತ್ತಾರೆ:

**ಹರಿ ಅನಂತ, ಹರಿಕಥಾ ಅನಂತಾ,**
**ಕಹಹಿಃ ಸುನಹಿ ಬಹು ಬಿಧಿ ಸಬಸಂತಾ ।**
**ರಾಮಚಂದ್ರಕೆ ಚರಿತಸುಹಾಏ,**
**ಕಲಪ ಕೋಟಿ ಲಗಿ ಜಾಹಿಃನ ಗಾಹೆಏ ॥**

ಶ್ರೀಹರಿಯು ಅನಂತ, ಹರಿಕಥೆಗಳು ಅನಂತವಾಗಿವೆ. ಸತ್ಪುರುಷರು ಅದನ್ನು ಅನೇಕ ವಿಧಗಳಿಂದ ಕೇಳುತ್ತಾರೆ, ಹೇಳುತ್ತಾರೆ. ಶ್ರೀರಾಮನ ಸುಂದರ ಚರಿತವನ್ನು ಕಲ್ಪಕೋಟಿಗಳಲ್ಲೂ ಹಾಡಿ ಮುಗಿಸಲಾಗುವುದಿಲ್ಲ.

ವಾಲ್ಮೀಕಿ ಮಹರ್ಷಿಗಳು ಶ್ರೀರಾಮನನ್ನು ಒಂದು ರೂಪದಲ್ಲಿ ನೋಡಿದ್ದು ತುಲಸೀದಾಸರು ಬೇರೊಂದು ರೂಪದಲ್ಲಿ ನೋಡಿದರೆ ಇದರಲ್ಲಿ ಆಶ್ಚರ್ಯವಿಲ್ಲ. ಇದು ಸ್ವಾಭಾವಿಕವಾಗಿದೆ. ತುಲಸೀದಾಸರು ಮತ್ತೂ ಒಂದು ಮಾತನ್ನು ಹೇಳುತ್ತಾರೆ, ಯಾವ ಶ್ರೀರಾಮನು ನಮ್ಮ ಭಾವನೆಗಳಿಗೆ ಅನುಕೂಲನಾಗಿಲ್ಲವೋ ಅವನು ನಮಗೆ ಹೇಗೆ ತೃಪ್ತಿ ನೀಡುವನು? ಒಬ್ಬ ನ್ಯಾಯಾಧೀಶನು ತನ್ನ ಮಕ್ಕಳಿಗೆ ತಂದೆಯಾಗಿರುವನು, ಪತ್ನಿಗೆ ಪತಿಯೂ ಆಗಿರುವನು ಮತ್ತು ತನ್ನ ಸ್ಥಾನದಲ್ಲಿ ನ್ಯಾಯಾಧೀಶನೂ ಆಗಿರುವನು. ಮಗನು ತನ್ನ ತಂದೆಯ ಹುದ್ದೆಯ ಸ್ಥಾನಮಾನಗಳ ದೃಷ್ಟಿಯಿಂದ ತಂದೆಯನ್ನು ನೋಡುವುದಿಲ್ಲ. ತನ್ನ ತಂದೆ ಎಷ್ಟು ದೊಡ್ಡ ನ್ಯಾಯಾಧೀಶ, ಕಾನೂನಿನ ಪಂಡಿತ ಎಂದು ನೋಡುವುದಿಲ್ಲ. ತಂದೆಗೆ ತನ್ನಲ್ಲಿ ಎಷ್ಟು ವಾತ್ಸಲ್ಯವಿದೆ ಎಂಬುದರ ಕಡೆ ಅವನ

ದೃಷ್ಟಿ ಇರುತ್ತದೆ. ಆದರೆ ನ್ಯಾಯದ ನಿರೀಕ್ಷೆಯಲ್ಲಿರುವ ಬೇರೊಬ್ಬ ವ್ಯಕ್ತಿಯ ದೃಷ್ಟಿ ಈ ನ್ಯಾಯಾಧೀಶನಿಗೆ ಕಾನೂನಿನ ಬಗ್ಗೆ ಎಷ್ಟು ತಿಳಿವಳಿಕೆ ಇದೆ, ಅದರಲ್ಲಿ ಎಷ್ಟು ಪಾಂಡಿತ್ಯವಿದೆ ಹಾಗೂ ಅವನು ಹೇಗೆ ನಿಷ್ಪಕ್ಷಪಾತವಾಗಿ ನ್ಯಾಯ ನೀಡುವನು ಎಂಬುದರ ಕಡೆ ಇರುತ್ತದೆ. ಅದರಂತೆಯೇ ನಾವು ನಮ್ಮ ಭಾವನೆಯ ತೃಪ್ತಿಗಾಗಿ ಯಾವ ರಾಮನನ್ನು ಬಯಸುವೆವೋ ಅದು ಮುಖ್ಯವಾಗಿದೆ. ಶ್ರೀರಾಮನ ಈಶ್ವರತ್ವದಿಂದ ನಮಗೆ ಈ ಭಾವನೆಯ ತೃಪ್ತಿ ಸಿಗುತ್ತದೆ; ಯಾರು ನಮ್ಮ ಅಂತರ್ಯಾಮಿಯಾಗಿ ನಮ್ಮ ಹೃದಯಕ್ಕೆ ಹತ್ತಿರನಾಗಿರುವನೋ ಅದೇ ರಾಮನನ್ನು ನಾವು ಸೇರಬಲ್ಲೆವು, ಅವನೊಂದಿಗೆ ಮಾತಾಡಬಲ್ಲೆವು.

ಶ್ರೀರಾಮನ ವಿಲಕ್ಷಣತೆಯ ಒಂದು ಚಿತ್ರವನ್ನು ತುಲಸೀದಾಸರು ಅರಣ್ಯಕಾಂಡದಲ್ಲಿ ನೀಡುತ್ತಾರೆ: **ಬೈಠೇ ಪರಮ ಪ್ರಸನ್ನ ಕೃಪಾಲಾ, ಕಹತ ಅನುಜ ಸನ ಕಥಾ ರಸಾಲಾ**—'ಭಗವಾನ್ ಶ್ರೀರಾಮನು ಮುಗುಳ್ನಗುತ್ತಾ ಪ್ರಸನ್ನ ಭಾವದಿಂದ ಕುಳಿತುಕೊಂಡಿರುವನು ಮತ್ತು ಲಕ್ಷ್ಮಣನಿಗೆ ಸ್ವಾರಸ್ಯವಾದ ಮಾತುಗಳನ್ನು ಹೇಳುತ್ತಿರುವನು." ಆದರೆ ಇದೇ ದೋಹೆಯ ಎರಡನೆಯ ಪಂಕ್ತಿಯು ಬೇರೆಯ ದೃಷ್ಟಿಯನ್ನು ನೀಡುತ್ತದೆ. ತುಲಸೀದಾಸರು ಅದೇ ಸಮಯದಲ್ಲಿ ನಾರದರು ಅಲ್ಲಿಗೆ ಬರುವುದನ್ನು ತಿಳಿಸಿ, **ಬಿರಹ ವಂತ ಭಗವಂತಹಿ ದೇಖಿ ನಾರದ ಮನ ಭಾ ಸೋಚ ಬಿಸೇಷೀ** "ಭಗವಾನನು ವಿರಹ ವೇದನೆಯಿಂದ ಕಣ್ಣೀರು ಸುರಿಸುವುದನ್ನು ನೋಡಿ ಅವರ ಹೃದಯವು ತುಂಬಾ ವ್ಯಾಕುಲಗೊಂಡಿತು." ಈ ಎರಡೂ ಪಂಕ್ತಿಗಳು ಪರಸ್ಪರ ವಿರೋಧವಾಗಿವೆ. ಒಂದು ವೇಳೆ ಈ ಪಂಕ್ತಿಗಳು ಸ್ವಲ್ಪ ದೂರದಲ್ಲಿ ಇರುತ್ತಿದ್ದರೆ ಸ್ವಲ್ಪ ಹೊತ್ತಿನ ಮೊದಲು ಶ್ರೀರಾಮನು ಪ್ರಸನ್ನನಾಗಿ ಇದ್ದಿರಬಹುದು ಆದರೆ ಮತ್ತೀಗ ಅವನಿಗೆ ಬೇಸರವಾಗಿರಬಹುದು ಎಂದು ನಾವೆಣಿಸಬಹುದಿತ್ತು. ಒಂದೇ ದ್ವಿಪದಿಯ ಆಚೆ ಈಚೆ ವಿರುದ್ಧ ಮಾತುಗಳನ್ನು ಬರೆಯುವುದು ಅಸಮಂಜಸವೆನಿಸುತ್ತದೆ.

ಇಲ್ಲಿ ತುಲಸೀದಾಸರ ಭಾವದೃಷ್ಟಿಯನ್ನು ವಿಚಾರಮಾಡಿ ನೋಡುವುದು ಅವಶ್ಯ. ಇದು ಅರಣ್ಯಕಾಂಡದ ಸನ್ನಿವೇಶ; ಶ್ರೀರಾಮನನ್ನು ನೋಡಲು ಒಂದು ಕಡೆಯಿಂದ ಶಂಕರನು ಬಂದಿರುವನು. ಶಂಕರನ ದೃಷ್ಟಿಯಲ್ಲಿ ಶ್ರೀರಾಮನು ಈಶ್ವರನಾಗಿರುವನು, ಸಚ್ಚಿದಾನಂದ ಬ್ರಹ್ಮನಾದ ಅವನಲ್ಲಿ ಆನಂದ ಬಿಟ್ಟು ಬೇರೇನೂ ಇರಲು ಸಾಧ್ಯವಿಲ್ಲ. ಯಾವಾಗ ಶಂಕರನು ಶ್ರೀರಾಮನನ್ನು ನೋಡುತ್ತಾನೊ ಆಗ ಶ್ರೀರಾಮನು ಹೇಗೆ ಕಾಣಿಸುತ್ತಿದ್ದನು? **ಬೈಠೇ ಪರಮ ಪ್ರಸನ್ನ ಕೃಪಾಲಾ ।** ಅದೇ ಸಮಯದಲ್ಲಿ ನಾರದರು ಬಂದರು ಮತ್ತು ಅವರಿಗೆ ಶ್ರೀರಾಮನು ದುಃಖಿಸುತ್ತಿರುವಂತೆ ಕಂಡುಬಂದನು. ಇದಕ್ಕೆ ಕಾರಣವೇನು? ಈ ಹಿಂದೆ ನಾರದರು ದೇವರಿಗೆ ಶಾಪಕೊಟ್ಟ ಪ್ರಸಂಗ ಉಲ್ಲೇಖಯೋಗ್ಯ. "ನೀನು ನನ್ನ ವಿವಾಹ ನಡೆಯಲು ಬಿಡದೆ ನನಗೆ ತುಂಬಾ ದುಃಖ ನೀಡಿರುವುದರಿಂದ ನಿನಗೂ ಪತ್ನಿವಿಯೋಗವಾಗಿ ರೋದಿಸುವಂತಾಗಲಿ" ಎಂದು ನಾರದರು ಶಾಪ ನೀಡಿದ್ದರು. ಒಂದೇ ಸಮಯದಲ್ಲಿ ಶ್ರೀರಾಮನು ಶಂಕರನಿಗೆ ಪ್ರಸನ್ನತೆಯಿಂದ ಮುಗುಳ್ನಗುತ್ತಿರುವಂತೆಯೂ, ನಾರದರಿಗೆ ದುಃಖಗೊಂಡವನಂತೆಯೂ ಕಾಣಸಿಗುವನು. ಇಂತಹ ಚಮತ್ಕಾರದ ಅಭಿನಯ ದೇವರೇ ಮಾಡಲು ಶಕ್ತನಲ್ಲದೆ ಬಡಪಾಯಿ ಮನುಷ್ಯನು ಹೇಗೆ ಮಾಡುವನು? ವ್ಯಕ್ತಿಯು ರೋದಿಸುವಾಗ ಸಂಪೂರ್ಣ ದುಃಖತಪ್ತನಾಗುವನು; ವ್ಯಕ್ತಿಯು ನಸುನಗುವಾಗ ಸಂತಸದ ಅನುಭವವಿರುವುದು. ಒಮ್ಮೆಗೆ ಇವೆರಡೂ ಇರುವುದು ಸಾಮಾನ್ಯವಾಗಿ ಕಂಡುಬರುವುದಿಲ್ಲ.

ನಾರದರು ಭಗವಾನ್ ಶ್ರೀರಾಮನು ಅಳುತ್ತಿರುವುದನ್ನು ನೋಡಿ ಹೊರಗೆ ಬೇಸರಿಸುತ್ತಾರೆ. ಆದರೆ ಮನಸ್ಸಿನಲ್ಲಿಯೇ ಸಂತೋಷಿಸುತ್ತಾರೆ. ಅವರು ಯೋಚಿಸುತ್ತಾರೆ: **ಮೋರ ಸಾಪ ಕರಿ ಅಂಗೀಕಾರಾ, ಸಹತ ರಾಮ ನಾನಾ ದುಃಖಭಾರಾ** "ನನ್ನ ಮಾತನ್ನು ಉಳಿಸುವುದಕ್ಕಾಗಿಯೇ ಭಗವಂತನು ಇಷ್ಟು ದುಃಖವನ್ನು ಸ್ವೀಕರಿಸಿದನು." ಇಲ್ಲಿ ನಾರದ ಮತ್ತು ಶಿವನ ರಾಮ ಒಬ್ಬನೇ ಆದರೂ ಒಬ್ಬನಾಗಿಯೇ ಉಳಿಯಲು ಸಾಧ್ಯವಿಲ್ಲ. ಏಕೆಂದರೆ ಈ ಇಬ್ಬರ ಹೃದಯದ ಬೇಡಿಕೆಯು ಬೇರೆ ಆಗಿದೆ. ಶ್ರೀರಾಮನು ಅವರ ಹೃದಯದ ಬೇಡಿಕೆಯಂತೆ ಅವರ ಎದುರಿಗೆ ಗೋಚರಿಸುತ್ತಾನೆ. ತುಲಸೀದಾಸರ ಅಭಿಪ್ರಾಯದಲ್ಲಿ ನಾವು ನಮ್ಮ ಜೀವನದಲ್ಲಿ ರಾಮನನ್ನು ಯಾವ ರೂಪದಲ್ಲಿ ನೋಡಲು, ಪಡೆಯಲು ಇಚ್ಛಿಸುತ್ತೇವೆಯೋ ಈಗಲೂ ಹಾಗೆ ಪಡೆಯಲು ಸಾಧ್ಯವಿದೆ. ಇಲ್ಲಿಯೇ, ಈ ಸ್ಥಳದಲ್ಲಿ, ಈ ಕಾಲದಲ್ಲಿ ಮತ್ತು ಈ ಕ್ಷಣದಲ್ಲಿ ಪ್ರತಿ ವ್ಯಕ್ತಿಯೂ ತಾನು ಹಂಬಲಿಸುವ ಶ್ರೀರಾಮನನ್ನು ಪಡೆಯಲು ಸಾಧ್ಯವಿದೆ. ಕೆಲವರಿಗೆ ಶ್ರೀರಾಮನ ಮರ್ಯಾದಾರೂಪ, ಕೆಲವರಿಗೆ ಕೃಪಾಮಯ ರೂಪ, ಕೆಲವರಿಗೆ ಶೂರತಾಮಯ ರೂಪ, ಕೆಲವರಿಗೆ ಕೋಮಲತೆಯಿಂದ ತುಂಬಿದ ರೂಪ ಮತ್ತೆ ಕೆಲವರಿಗೆ ವಿಲಕ್ಷಣವಾದ ರೂಪವು ಪ್ರಿಯವಾಗುವುದು. ತುಲಸೀದಾಸರು ತಮ್ಮ ಈ ಮಹಾಗ್ರಂಥದ ಮೂಲಕ ಭಗವಂತನು ಭಕ್ತನಿಗೆ ಬೇಕಾಗುವ ರೀತಿಯಲ್ಲಿ ತೋರಿಕೊಳ್ಳುತ್ತಾನೆ ಎಂಬುದನ್ನು ತಿಳಿಸಿದ್ದಾರೆ.